


ನಿತಿನ್ ತೋಮರ್

ರಾಜೀವ್ ಲೂತ್ರಾ ಅವರ ಪ್ರಯತ್ನದಿಂದ 2014ರಲ್ಲಿ ಆರಂಭವಾದ ಲೀಗ್ ಈಗ ವಿಶ್ವವ್ಯಾಪಿ ತನ್ನ ಅಲೆಯನ್ನು ಹುಟ್ಟು ಹಾಕಿದೆ.

ಲೀಗ್ ಶುರುವಾದ ಬಳಿಕ ಕಬಡ್ಡಿ ಆಟಗಾರರ ಬದುಕು ಬದಲಾಗಿದೆ. ಸಂಭಾವನೆ ಪಡೆಯುವ ವಿಷಯದಲ್ಲಿ ಕ್ರಿಕೆಟಿಗರಿಗೆ ಸರಿಸಮನಾಗಿ ಬೆಳೆಯುತ್ತಿದ್ದಾರೆ. ಜೊತೆಗೆ ತಾರಾ ವರ್ಚಸ್ಸೂ ಸಿಕ್ಕಿದೆ. ಕಬಡ್ಡಿ ಆಟಗಾರರು ಈಗ ಎಲ್ಲಿಯೇ ಹೋದರೂ ಜನ ಮುತ್ತಿಕೊಳ್ಳುವುದು ಸಾಮಾನ್ಯವಾಗಿದೆ.

ಐದನೇ ಆವೃತ್ತಿಗೆ ಇತ್ತೀಚೆಗೆ ನಡೆದ ಪ್ರೊ ಕಬಡ್ಡಿ ಹರಾಜು ಪ್ರಕ್ರಿಯೆಯಲ್ಲಿ ಹಣದ ಹೊಳೆಯೇ ಹರಿದಿದೆ. 227 ಆಟಗಾರರನ್ನು ಖರೀದಿಸಲು 12 ಫ್ರಾಂಚೈಸ್‌ಗಳು ಒಟ್ಟು ₹46.99 ಕೋಟಿ ವೆಚ್ಚ ಮಾಡಿವೆ. ಕಬಡ್ಡಿಯ ಮಟ್ಟಿಗೆ ಇದು ದಾಖಲೆಯೇ.

ಯೋಧ ನಿತಿನ್ ತೋಮರ್ ಅವರು ₹93 ಲಕ್ಷ ಮೊತ್ತಕ್ಕೆ ಹರಾಜಾಗುವ ಮೂಲಕ ಹೊಸ ಮೈಲಿಗಲ್ಲು ನೆಟ್ಟಿದ್ದಾರೆ. ರೋಹಿತ್ ಕುಮಾರ್ (₹81 ಲಕ್ಷ), ಮಂಜೀತ್ ಚಿಲಾರ್ (₹75.5 ಲಕ್ಷ) ಮತ್ತು ಕೊರಿಯಾದ ಜಂಗ್ ಕುನ್ ಲಿ (₹80.3 ಲಕ್ಷ) ಅವರೂ ಈ 'ಸ್ಟಾರ್'ಗಳ ಸಾಲಿಗೆ ಸೇರಿದ್ದಾರೆ. ಯುವ ಆಟಗಾರ ಸೂರಜ್ ದೇಸಾಯಿ ₹52.50 ಲಕ್ಷಕ್ಕೆ ಮಾರಾಟ ವಾಗಿರುವುದು ದೇಶೀ ಕ್ರೀಡೆಯ ಖ್ಯಾತಿಗೆ ಸಾಕ್ಷಿ.

ಚೀನಾದ ಮೊಬೈಲ್ ಕಂಪೆನಿ ವಿವೊ ₹300 ಕೋಟಿ ನೀಡಿ ಮುಂದಿನ ಐದು ವರ್ಷಗಳ ಪ್ರಾಯೋಜಕತ್ವದ ಹಕ್ಕು ಖರೀದಿಸಿದೆ! ವಿದೇಶಿ ಆಟಗಾರರೂ ಪಾಲ್ಗೊಂಡಿರುವ ಕಾರಣ ಭಾರತವಲ್ಲದೆ ಅಮೆರಿಕ, ಕೆನಡಾ, ಇಂಗ್ಲೆಂಡ್, ಆಸ್ಟ್ರೇಲಿಯಾ, ಇರಾನ್, ಪೋಲೆಂಡ್, ಪಾಕಿಸ್ತಾನ, ಬಾಂಗ್ಲಾದೇಶ, ಕೊರಿಯಾ, ಜಪಾನ್ ಮತ್ತು ಕೆನ್ಯಾ ದೇಶಗಳಲ್ಲೂ ಕಬಡ್ಡಿ ಲೀಗ್ ವೀಕ್ಷಿಸುವವರ ಸಂಖ್ಯೆ ಹೆಚ್ಚುತ್ತಿದೆ.

ಲೀಗ್‌ನಿಂದ ಅನೇಕ ಯುವಕರು ಪ್ರವರ್ಧಮಾನಕ್ಕೆ ಬಂದಿದ್ದಾರೆ. ಹೊಸಬರನ್ನು ಗುರುತಿಸುವ ಸಲುವಾಗಿ ಪ್ರಸಕ್ತ ಸಾಲಿನಲ್ಲಿ 'ಯಂಗ್ ಟ್ಯಾಲೆಂಟ್ ಪೂಲ್' ಎಂಬ ಯೋಜನೆಯ ಅಡಿ 18 ರಿಂದ 22 ವರ್ಷದೊಳಗಿನವರ ಉದಯೋನ್ಮುಖ ಆಟಗಾರರನ್ನು ಆಯ್ಕೆ ಮಾಡಲಾಗಿತ್ತು. ಸುಮಾರು 150 ಆಟಗಾರರಿಗೆ ವಿಶೇಷ ತರಬೇತಿ ನೀಡಲಾಗಿತ್ತು.

ಕಬಡ್ಡಿ ಲೀಗ್‌ನಲ್ಲಿ ಕ್ರೀಡೆಗೆ ಆಧುನಿಕತೆಯ ಸ್ಪರ್ಶ ನೀಡಲಾಗಿದೆ. ವೀಕ್ಷಕರನ್ನು ಸೆಳೆಯುವ ಸಲುವಾಗಿ ಇಂಗ್ಲಿಷ್, ಹಿಂದಿ, ಕನ್ನಡ ಮತ್ತು ತೆಲುಗು ಸೇರಿದಂತೆ ಕೆಲ ಪ್ರಾದೇಶಿಕ ಭಾಷೆಗಳಲ್ಲೂ ವೀಕ್ಷಕ ವಿವರಣೆ ನೀಡಲಾಗುತ್ತಿದೆ.







ಜಂಗ್ ಕುನ್ ಲಿ

ಪ್ರೊ ಕಬಡ್ಡಿಗೆ ದೊಡ್ಡ ಮಟ್ಟದಲ್ಲಿ ತಾರಾ ಮೆರುಗು ಲಭಿಸಿದೆ. ಬಾಲಿವುಡ್ ನಟ ಅಭಿಷೇಕ್ ಬಚ್ಚನ್ ಅವರು ಜೈಪುರ ಪಿಂಕ್ ಪ್ಯಾಂಥರ್ಸ್ ತಂಡದ ಒಡೆತನ ಹೊಂದಿದ್ದಾರೆ. ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಈ ಬಾರಿ ತಮಿಳುನಾಡು ತಂಡದ ಸಹ ಮಾಲೀಕತ್ವ ಪಡೆದಿದ್ದಾರೆ.

ಅಮೀರ್ ಖಾನ್, ಅಮಿತಾಭ್ ಬಚ್ಚನ್, ಐಶ್ವರ್ಯ ರೈ ಬಚ್ಚನ್ ಸೇರಿ ದಂತೆ ಅನೇಕ ತಾರೆಯರು ಪಂದ್ಯದ ದಿನ ಕ್ರೀಡಾಂಗಣಕ್ಕೆ ಬಂದು ಅಭಿಮಾನಿಗಳು ಖುಷಿಯ ಕಡಲಲ್ಲಿ ತೇಲುವಂತೆ ಮಾಡಿದ್ದಾರೆ.

## ಕನ್ನಡಿಗರ ಸಾಧನೆ

ಪ್ರೊ ಕಬಡ್ಡಿ ಲೀಗ್‌ನಲ್ಲಿ ಕರ್ನಾಟಕದ ಪ್ರತಿಭೆಗಳೂ ಮಿಂಚು ಹರಿಸುತ್ತಿದ್ದಾರೆ. ರಕ್ಷಣಾ ವಿಭಾಗದ ಆಟಗಾರ ಬೆಂಗಳೂರಿನ ಜೀವ ಕುಮಾರ್ ಈ ಬಾರಿ ಉತ್ತರ ಪ್ರದೇಶ ತಂಡದಲ್ಲಿದ್ದಾರೆ. ರೈಡರ್ ಶಬೀರ್ ಬಾಪು ಅವರು ಯು ಮುಂಬಾ ತಂಡದ ಪರ ಆಡಲಿದ್ದು, ದಕ್ಷಿಣ ಕನ್ನಡ ಜಿಲ್ಲೆಯ ಸುಖೇಶ್ ಹೆಗ್ಡೆ ಮತ್ತು ಪ್ರಶಾಂತ್ ಕುಮಾರ್ ರೈ ಅವರು ಕ್ರಮವಾಗಿ ಗುಜರಾತ್ ಮತ್ತು ಹರಿಯಾಣ ತಂಡಗಳ ಭಾಗವಾಗಿದ್ದಾರೆ. ಉದಯೋನ್ಮುಖ ಆಟಗಾರರಾದ ನೆಲಮಂಗಲದ ದರ್ಶನ್ ಮತ್ತು ಚನ್ನಪಟ್ಟಣದ ಆಲ್‌ರೌಂಡರ್ ಎನ್. ಅಭಿಷೇಕ್ ಅವರೂ ಲೀಗ್‌ನಲ್ಲಿ ಆಡುವ ಅವಕಾಶ ಪಡೆದಿದ್ದಾರೆ.

ದರ್ಶನ್ ಅವರನ್ನು ಯು ಮುಂಬಾ ಫ್ರಾಂಚೈಸ್ ₹11.8 ಲಕ್ಷ ನೀಡಿ ಖರೀದಿಸಿದೆ. ಅಭಿಷೇಕ್ ಅವರನ್ನು (₹5 ಲಕ್ಷ) ಜೈಪುರ ಪಿಂಕ್ ಪ್ಯಾಂಥರ್ಸ್ ತನ್ನತ್ತ ಸೆಳೆದುಕೊಂಡಿದೆ. ಮುಂಬೈನಲ್ಲಿ ನೆಲೆಸಿರುವ ಉಡುಪಿ ಜಿಲ್ಲೆಯ ರಿಷಾಂಕ್ ದೇವಾಡಿಗ (₹45.5 ಲಕ್ಷ) ಉತ್ತರ ಪ್ರದೇಶ ತಂಡದಲ್ಲಿದ್ದಾರೆ.




ಮಂಜೀತ್ ಚಿಲಾರ್

ಲೀಗ್‌ನ ಮೊದಲ ನಾಲ್ಕು ಆವೃತ್ತಿ ಗಳಲ್ಲಿ ಬೆಂಗಳೂರು ಬುಲ್ಸ್, ಪುಣೇರಿ ಪಲ್ಟನ್, ತೆಲುಗು ಟೈಟನ್ಸ್, ಯು ಮುಂಬಾ, ಬೆಂಗಾಲ್ ವಾರಿಯರ್ಸ್, ದಬಾಂಗ್ ಡೆಲ್ಲಿ, ಜೈಪುರ ಪಿಂಕ್ ಪ್ಯಾಂಥರ್ಸ್ ಮತ್ತು ಪಟ್ನಾ ಪೈರೇಟ್ಸ್ ತಂಡಗಳು ಆಡಿದ್ದವು. ಆದರೆ ಈ ವರ್ಷ ಈ ಸಾಲಿಗೆ ಹೊಸದಾಗಿ ನಾಲ್ಕು ತಂಡಗಳು ಸೇರ್ಪಡೆಯಾಗಿವೆ.

ದೇಶದ ಎಲ್ಲಾ ಭಾಗಗಳಿಗೂ ಕಬಡ್ಡಿ ಕಂಪು ಪಸರಿಸುವ ಉದ್ದೇಶದಿಂದ ಭಾರತ ಅಮೆಚೂರ್ ಕಬಡ್ಡಿ ಫೆಡರೇಷನ್ ಈ ಬಾರಿ ಹರಿಯಾಣ ಸ್ಟೀಲರ್ಸ್, ಉತ್ತರ ಪ್ರದೇಶ, ಗುಜರಾತ್ ಮತ್ತು ತಮಿಳು ನಾಡು ತಂಡಗಳನ್ನು ಸೇರ್ಪಡೆ ಮಾಡಿದೆ. ಹೀಗಾಗಿ ತಂಡಗಳ ಸಂಖ್ಯೆ 12ಕ್ಕೆ ಹೆಚ್ಚಿದೆ. ●